## ರೋಚಕ ಬರಹ

'ಹೃದಯ ರಿಪೇರಿ', ದಿಲಾವರ್ ರಾಮದುರ್ಗ ಅವರ ಮುಖಪುಟ ಲೇಖನ (ಸುಧಾ, ನವೆಂಬರ್ 1) ಅತ್ಯಂತ ರೋಚಕವಾಗಿ ಮೂಡಿಬಂದಿದೆ. ಅತ್ಯಾಧುನಿಕ ಶಸ್ತ್ರಚಿಕಿತ್ಸೆಯ ವಿವರಗಳನ್ನು ಇಲ್ಲಿ ದಾಖಲಿಸಲಾಗಿದ್ದು, ಸಾಂಸ್ಕೃತಿಕ, ಸಾಹಿತ್ಯಕ ಹಿನ್ನೆಲೆಯಿಂದ ಬಂದ ಡಾ.ಸಾತ್ಯಕಿ ನಂಬಳ ಅವರ ಬಗ್ಗೆ ತಿಳಿದು ಹೆಮ್ಮೆಯೆನಿಸಿತು. ಬರಹ ಹೃದಯಸ್ಪರ್ಶಿಯಾಗಿದೆ.

–ಸುನಂದಾ ಹಾಲಭಾವಿ ಬೆಳಗಾವಿ, ಟಿ.ಎಂ. ಮಾನಪ್ಪ ಶಿವಮೊಗ್ಗ, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಎ.ಪಿ. ರಂಗನಾಥ್ ಮೈಸೂರು, ಪಿ.ಗೋವಿಂದರಾಜ್ ಶಿವಮೊಗ್ಗ, ಸಿ.ಪಿ.ಕೆ. ಮೈಸೂರು, ಮಹಾವೀರ ಕಾಸರ ಶಿವಮೊಗ್ಗ, ಎಸ್.ಲಕ್ಷ್ಮೀನರಸಿಂಹ ಚಾಮರಾಜನಗರ, ನೀಲಮ್ಮ ಕುಮಾರಪ್ಪ ಲಿಂಗಸಗೂರು, ಚಂದ್ರಶೇಖರ ಎನ್.ಎಸ್., ವೆಂಕಟರಮಣ ಆಚಾರ್ ಹೆಚ್. ಎಸ್. ಬೆಂಗಳೂರು, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ

## ಈ ಖುಷಿ ಎಂದೂ ಸಿಕ್ಕಿರಲಿಲ್ಲ

ಡಾ ಸಾತ್ಯಕಿ ನಂಬಳ ಅವರು ಮಾಡಿದ ಹೃದಯ ಶಸ್ತ್ರಚಿಕಿತ್ಸೆಯ ವಿವರಗಳನ್ನು ಲೇಖಕರು ಬಹಳ ಚೆನ್ನಾಗಿ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಶಸ್ತ್ರಚಿಕಿತ್ಸೆಗಳನ್ನು ಟೀವಿಯಲ್ಲಿ ನೋಡಿದ್ದೆ. ಆದರೆ ಇಂತಹ ಖುಷಿ ಎಂದೂ ಸಿಕ್ಕಿರಲಿಲ್ಲ.

–ಪುಷ್ಪಾ ಶ್ರೀರಾಮ್ ಬೆಂಗಳೂರು

## ಸಕಾಲಿಕ

'ವಿಚಾರ ಲಹರಿ'ಯಲ್ಲಿ 'ನಿಜದ ನೆಲೆ ಯಾವುದಯ್ಯ?' (ಪುರಂಜೀವಿ) ಬರಹ ಸಕಾಲಿಕ. ಸಂಸ್ಕೃತ–ಸಂಸ್ಕೃತಿ ಸಂಸ್ಕಾರದ ಒಳಹುರಳನ್ನು ಬರಹ ವಿಷದಪಡಿಸಿದೆ.

–ಚನ್ನಬಸವ ಪುತ್ತೂರ, ಚಿತ್ರದುರ್ಗ, ಡಾ.ಜಿ.ಕೃಷ್ಣಪ್ಪ ಬೆಂಗಳೂರು

## ಅರ್ಥಗರ್ಭಿತ

'ನಿಮ್ಮೊಡನೆ'ಯಲ್ಲಿ 'ಅಂತರ್ಜಲ ಮತ್ತು ಅಂತರಂಗದ ದೊಣೆ' (ರಘುನಾಥ ಚ.ಹ.) ಬರಹ ಅರ್ಥಗರ್ಭಿತ.

– ಎಂ. ಮೃತ್ಯುಂಜಯಪ್ಪ ಚಿತ್ರದುರ್ಗ, ಅರವಿಂದ ಜೋಷಿ ಮೈಸೂರು

## ಉಪಯುಕ್ತ ಮಾಹಿತಿ

ಆರೋಗ್ಯ ಲೇಖನ 'ಬಾಯಿಯಲ್ಲಿ ಜೊಲ್ಲುಗುಳ್ಳೆ' (ಡಾ.ಮುರಲೀ ಮೋಹನ್ ಚೂಂತಾರು) ಉಪಯುಕ್ತ ಮಾಹಿತಿಗಳಿಂದ ಕೂಡಿದೆ.

–ವಿ.ಹೇಮಂತಕುಮಾರ, ಬೆಂಗಳೂರು

## ಉತ್ತಮ ಬರಹ

'ವಿಂಡೀಸ್; ಹೀಗೇಕೆ ಉಡೀಸ್?' (ವಿಶಾಖ ಎನ್.) ಕ್ರೀಡಾ ಬರಹ ಸೊಗಸಾಗಿದೆ. ಕ್ರಿಕೆಟ್ ಆಟಕ್ಕೆ ಹೊಸ ಆಯಾಮವನ್ನು ನೀಡುವುದರ ಮೂಲಕ ಸಾರ್ವಭೌಮತ್ವ ಮೆರೆದು ದೈತ್ಯ ಎನಿಸಿಕೊಂಡದ್ದು ವೆಸ್ಟ್‌ಇಂಡೀಸ್ ತಂಡ ಇಂದು ಆತಂಕದ ಸ್ಥಿತಿ ತಲುಪಿದ್ದು ಶೋಚನೀಯ.

–ನರೇಂದ್ರ ಸಿರಕಜೆ ಮೈಸೂರು




## ಮಾರ್ಮಿಕ ಕಥೆ

ಕಥೆ 'ಆಟ ಹುಡುಗಾಟವೋ' (ಡಿ.ಎನ್. ಗೀತಾ) ಮಾರ್ಮಿಕವಾಗಿದೆ. ಆರಂಭದಿಂದಲೂ ಕುತೂಹಲ ತಳಮಳ, ಆತಂಕಗಳನ್ನು ಸೃಷ್ಟಿಸುತ್ತಾ, ಮುಂದೇನಾಗುವುದೋ ಎನ್ನುತ್ತಾ ರೋಚಕತೆ ಉಳಿಸಿ ಕೊನೆಗೆ ಸುಖಾಂತ್ಯವಾದದ್ದು ಸಮಾಧಾನದ ಸಂಗತಿ.

– ಶ್ರೀಧರ ರಾಯಸಂ ಬೆಂಗಳೂರು

## ವಿಜ್ಞಾನದ ರಂಗೋಲಿ

'ಜೀವಪರ ರಂಗೋಲಿ' (ಪ್ರಕಾಶ ಎಸ್. ಮನ್ನಂಗಿ) ಚಿತ್ರ ಲೇಖನ ಓದಿ ಖುಷಿಯಾಯಿತು. ಇಂಥ ನೂತನ, ವಿಜ್ಞಾನದ ಅರಿವು ಉಂಟು ಮಾಡುವ ರಂಗೋಲಿಗಳ ಪ್ರದರ್ಶನ ಎಲ್ಲ ಶಾಲೆಗಳಲ್ಲೂ ನಡೆಯಬೇಕು. ಆಗ ಮಕ್ಕಳಿಗೆ ವಿಜ್ಞಾನದ ಬಗ್ಗೆ ಆಸಕ್ತಿ ಇನ್ನೂ ಹೆಚ್ಚುತ್ತದೆ.

–ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ, ಮಧುರಾ ಸುಬ್ರಹ್ಮಣ್ಯ ಬೆಂಗಳೂರು

## ಮಕ್ಕಳು ಅಭಿನಂದನಾರ್ಹರು

ರಂಗೋಲಿ ಒಂದು ಸುಂದರ ಕಲೆ. ಈ ಕಲೆಯನ್ನು ಇನ್ನಷ್ಟು ಸುಂದರಗೊಳಿಸಿದ ಹಿರೇಕೆರೂರು ತಾಲ್ಲೂಕಿನ ಕಚವಿ ಪ್ರೌಢಶಾಲೆಯ ಮಕ್ಕಳು ಅಭಿನಂದನಾರ್ಹರು.

–ಮೀನಾಕ್ಷಿ ಕೆ. ರಾಮಗುಂಡಿ ಬೈಲಹೊಂಗಲ

## ಮಿಂಚುಳ್ಳಿ ಜಲಧಾರೆ

'ಮಲ್ಲಳ್ಳಿ ಮಿಂಚುಳ್ಳಿ (ಕೆ.ಪಿ. ಸತ್ಯನಾರಾಯಣ) ಬರಹದಲ್ಲಿ ಜಲಪಾತವು ದಟ್ಟಾರಣ್ಯದ ನಡುವೆ ನರ್ತನ ಮಾಡುತ್ತಾ ಸಾಗುತ್ತಿರುವುದನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ಕರ್ನಾಟಕದಲ್ಲಿ ಇಂತಹ ಅನೇಕ ಜಲಪಾತಗಳಿದ್ದರೂ ಪ್ರವಾಸೋದ್ಯಮ ಇಲಾಖೆಯ ನಿರ್ಲಕ್ಷ್ಯದಿಂದಾಗಿ ಸುಂದರ ಜಲಪಾತಗಳು ಜನಸಾಮಾನ್ಯರಿಗೆ ಪರಿಚಯವಾಗುವುದೇ ಇಲ್ಲ.

–ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು, ನಾರಾಯಣಯಾಜಿ ಶಿರಾಲಿ

## ಗಮನಸೆಳೆದ 'ಅಬ್ಯಾನೆ'

'ಅಬ್ಯಾನೆ; ಆಧುನಿಕ ಇರಾನ್‌ನ ಪ್ರಾಚೀನ ಗ್ರಾಮ' (ಡಾ.ಡಿ.ವಿ. ಗುರುಪ್ರಸಾದ್) ಪ್ರವಾಸ ಲೇಖನ ಗಮನಸೆಳೆಯಿತು. ಬುಡಕಟ್ಟು ಜನರ ನೆಲೆಯಾದ 'ಅಬ್ಯಾನೆ' ಇರಾನ್‌ನ ಪ್ರಾಚೀನ ಗ್ರಾಮವಾಗಿರುವುದರ ಜತೆಗೆ ತನ್ನ ಪ್ರಾಕೃತಿಕ ಅನನ್ಯತೆಯಿಂದ ಪ್ರವಾಸಿಗರನ್ನು ಸೆಳೆಯುತ್ತಿದೆ.

–ರವೀಂದ್ರನಾಥ ಶಿ. ಯಡಹಳ್ಳಿ ಬೀಳಗಿ, ಪ್ರಾರ್ಥನಾ ಹೇಮಂತಕುಮಾರ ಬೆಂಗಳೂರು

## ಖೇದವಾಯಿತು

'ಸೆಲೆಬ್ರಿಟಿ' ಅಂಕಣದಲ್ಲಿ 'ಮಗ ತಂದ ಸೌಭಾಗ್ಯ' (ಹನಿ) ಬರಹ ಓದಿ ಖೇದವಾಯಿತು.

–ಸುಂದರ್ ಬೆಂಗಳೂರು

## ಮಡಿಕೆಯಲ್ಲಿ ಚಿತ್ತಾರ

ಮಣ್ಣಿನ ಮಡಿಕೆಯಲ್ಲಿ ಬಣ್ಣಗಳ ಚಿತ್ತಾರ! (ವಿ.ಎಸ್. ನಾಯಕ ಬಳಕೂರು) ಲೇಖನದಲ್ಲಿ ಮೂಡಿಬಂದ ಮಡಿಕೆಯ ಕಲಾಕೃತಿಗಳು ತುಂಬಾ ಆಕರ್ಷಣೀಯವಾಗಿದೆ.

–ನಿರ್ಮಲ ಶ್ರೀನಿವಾಸ್ ಬೆಂಗಳೂರು

## ಸಂಗೀತ ತಾರೆ

'ಅನ್ನಪೂರ್ಣಾದೇವಿ ಸುರ್‌ಬಹಾರ್‌ನಲ್ಲಿ ಲೀನ' (ಶೈಲಜ, ಟಿ.ಎಸ್.ವೇಣುಗೋಪಾಲ್) ಲೇಖನ ಓದುಗರನ್ನು ಸಂಗೀತ ಲೋಕಕ್ಕೆ ಕೊಂಡೊಯ್ದಿತು.

–ಪಿ.ಜಯವಂತ ಪೈ ಕುಂದಾಪುರ

## ನೆನಪಿನಂಗಳದಲ್ಲಿ ಅಪೂರ್ವ ಕಲಾವಿದೆ

ಹಿಂದೂಸ್ತಾನಿ ಸಂಗೀತದ ದಂತಕಥೆಯಂತಿರುವ ಅನ್ನಪೂರ್ಣಾ ದೇವಿ (ರೋಶನಾರಾ) ಅವರನ್ನು ಅತ್ಯಂತ ಆಪ್ತವಾಗಿ ಸ್ಮರಿಸಿಕೊಂಡು ಲೇಖಕರು ಕೆಲವು ಅಪೂರ್ವ ಸಂಗತಿಗಳನ್ನು ದಾಖಲಿಸಿದ್ದಾರೆ. ಎಂತೆಂಥ ಮಹಾನ್ ಕಲಾವಿದರು ತಮಗೆ ಸಂಗೀತವನ್ನು ಧಾರೆಯೆರೆದ ಅನ್ನಪೂರ್ಣಾದೇವಿ ಅವರನ್ನು ಸ್ಮರಿಸಿಕೊಳ್ಳುತ್ತಾರೆ. ಆಕೆ ಕಷ್ಟಗಳ ನಡುವೆ ಸಂತಳಂತೆ ಬದುಕಿದರು.

ಸುಮಾರು ವರ್ಷಗಳ ಹಿಂದೆ ಬೆಂಗಳೂರಿನ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಸರೋದ್ ಕಾರ್ಯಕ್ರಮವಿತ್ತು. ಕಾರ್ಯಕ್ರಮ ಮುಗಿದ ನಂತರ ಸಂಗೀತ ಲೋಕದ ಚಿಂತಕ ಬಿವಿಕೆ ಶಾಸ್ತ್ರಿಯವರು ಮಾತಿನ ಮಧ್ಯೆ 'ನಿಮ್ಮ ಸೋದರಿ ರೋಶನಾರಾ ಬಗ್ಗೆ ಒಂದೆರಡು ಮಾತು ಹೇಳಲು ಸಾಧ್ಯವಾ? ಎಂದು ಕೇಳಿದಾಗ ಆ ಮಹಾನ್ ಉಸ್ತಾದ್ ನಕ್ಕು ಸುಮ್ಮನಾದರು. ಇದೇ ರೀತಿಯಲ್ಲಿ ನಾನು ಕೋಲ್ಕತ್ತಾದ ರಾಸ್ ಬಿಹಾರಿ ರಸ್ತೆ ಪಕ್ಕದಲ್ಲಿರುವ ಉದಯಶಂಕರ್ ಅವರ ಮಗಳು ನಡೆಸುತ್ತಿರುವ ಕಲಾ ಸಂಸ್ಥೆಗೆ ಹೋದೆ. ನನಗೆ ಉದಯಶಂಕರ್ ಅವರ 'ಕಲ್ಪನಾ' ಬ್ಯಾಲೆ ತುಂಬಾ ಪ್ರಿಯವಾದದ್ದು. ಆಕೆ ಜೊತೆ ಮಾತಿನ ನಡುವೆ ಈ ಕಲಾವಿದೆ ಕುರಿತು ಕೇಳಿದಾಗ 'ನನ್ನ ಚಿಕ್ಕಮ್ಮನ ಸಂಗೀತ ಕೇಳುವ ಆಸೆ ಇತ್ತು. ಆದರೆ ಆಕೆಯನ್ನು ಭೇಟಿಯಾದರೂ ಅವರ ಸಂಗೀತ ಕೇಳುವ ಸೌಭಾಗ್ಯ ನನಗೆ ದೊರಕಲಿಲ್ಲ' ಎಂದಿದ್ದರು. ಹಾಗೆ ಹೇಳಿ ಅವರ ಸಂಸ್ಥೆಯ ಪ್ರವೇಶ ದ್ವಾರದಲ್ಲಿರುವ ಲೈಫ್ಸೈಜ್ ಸತ್ಯಸಾಯಿ ಬಾಬಾ ಅವರ ಭಾವಚಿತ್ರದ ಮುಂದಿದ್ದ ಪುಷ್ಪಗಳ ಒಂದು ದಳವನ್ನು ನನಗೆ ಕೊಟ್ಟಿದ್ದರು. ಅವರಿನ್ನು ಬರೀ ನೆನಪು ಮಾತ್ರ.

–ಶೂದ್ರ ಶ್ರೀನಿವಾಸ್ ಬೆಂಗಳೂರು